**ಕರ್ನಾಟಕಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೊ&ಫ/2017-18.

ದಿನಾಂಕ: 18 -08-2017

**ಸು ತ್ತೋ ಲೆ**

**ವಿಷಯ:** ಮಾರ್ಚ 2018ರಲ್ಲಿ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಪುನರಾವರ್ತಿತ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಬಗ್ಗೆ.

* * * * *

ಜೂನ್/ಜುಲೈ-2017ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ 25-07-2017 ರಂದು ಪ್ರಕಟಿಸಿ ಸದರಿ ಫಲಿತಾಂಶ ಪಟ್ಟಿಯನ್ನು ಕಾಲೇಜುವಾರು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ತಲುಪಿಸಲಾಗಿದೆ.

**ಪ್ರಕಟಿಸಲಾದ ಫಲಿತಾಂಶದಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಮಾರ್ಚ್ 2018ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಬಗ್ಗೆ ಪ್ರಾಚಾರ್ಯರಿಗೆ ವಿಶೇಷ ಸೂಚನೆಗಳು:**

1. ಈ ಸುತ್ತೋಲೆಯೊಂದಿಗೆ 2017ರ ಜುಲೈನಲ್ಲಿ ನಡೆಸಿದ ಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳ ಅಂಕಪಟ್ಟಿ 'ವ' ಪರೀಕ್ಷಾ ಅರ್ಜಿಗಳನ್ನು **OMR (Marks Card cum Application)** ಮುದ್ರಿಸಿ ಕಳುಹಿಸಿಕೊಡಲಾಗಿದೆ.
2. ಜೂನ್/ಜುಲೈ-2017ರಲ್ಲಿ ನಡೆಸಿದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ವಿದ್ಯಾರ್ಥಿಗಳು ಹಾಜರಾಗಿದ್ದು, ಪ್ರಕಟಿತ ಫಲಿತಾಂಶ ತಡೆಹಿಡಿದಿದ್ದಲ್ಲಿ/ಏನಾದರೂ ನ್ಯೂನ್ಯತೆ ಇದ್ದಲ್ಲಿ ದಿನಾಂಕ 25-08-2017ರ ಒಳಗಾಗಿ ಕೊಠಡಿ ಮೇಲ್ವಿಚಾರಕರ ದಿನಚರಿ ಮತ್ತು ಇತರೆ ಪೂರಕ ದಾಖಲೆಗಳನ್ನು ಕೇಂದ್ರ ಕಚೇರಿಗೆ ಖುದ್ದಾಗಿ ಒದಗಿಸಿ ಫಲಿತಾಂಶವನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಿದೆ. ತದನಂತರ ಬಂದಂತಹ ಯಾವುದೇ ರೀತಿಯ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ, ಮುಂದೆ ಸಂಭವಿಸಬಹುದಾದ 'ಆಗುಹೋಗುಗಳಿಗೆ' ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
3. ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಪಪೂಶಿಇ/ಶೈಶಾ-05 /ಹ.ಪ.ಕ್ರ.ಹೆ.ಅ(ಪರೀಕ್ಷೆ)/2014-15 ದಿನಾಂಕ 14-01-2015 ಹಾಗೂ ಪತ್ರದ ಸಂಖ್ಯೆ: ಪಪೂಶಿಇ/ಶೈಶಾ-05 /ಹ.ಪ.ಕ್ರ.ಹೆ.ಅ(ಪರೀಕ್ಷೆ)/2014-15, ದಿನಾಂಕ 20-05-2017ರಂತೆ ದ್ವಿತೀಯ ಪಿಯುಸಿ ಪಿಸಿಎಂಬಿ **(PCMB)** ವಿಜ್ಞಾನ ವಿಷಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾರ್ಚ್ 2018ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ **ಹೊಸ ಪಠ್ಯಕ್ರಮದಂತೆ (New Syllabus)**ಪರೀಕ್ಷೆ ನಡೆಸಲಾಗುವುದು.
4. ದ್ವಿತೀಯ ಪಿಯುಸಿ ಪಿಸಿಎಂಬಿ **(PCMB)** ಹೊರತು ಪಡಿಸಿ ಉಳಿದ ಎಲ್ಲಾ ಭಾಷೆ ಹಾಗೂ ಐಚ್ಛಿಕ ವಿಷಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ **ಹಳೆಯ ಪಠ್ಯಕ್ರಮದಲ್ಲಿ** ಪರೀಕ್ಷೆ ಬರೆಯಲು ಕೊನೆಯ ಅವಕಾಶ **2018ರ ವಾರ್ಷಿಕ ಪರೀಕ್ಷೆ. ಈ ಸೌಲಭ್ಯವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.**
5. ಮಾರ್ಚ್ 2018ರಲ್ಲಿ ನಡೆಯುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಪುನರಾವರ್ತಿ ಅಭ್ಯರ್ಥಿಗಳಿಂದ ಅಭ್ಯರ್ಥಿಗಳ ಅಂಕಪಟ್ಟಿ ಮತ್ತು ಪರೀಕ್ಷಾ ಅರ್ಜಿಗಳ **OMR (Marks Card cum Application)** ಆಧಾರದ ಮೇಲೆ ಮಾತ್ರ ಪರೀಕ್ಷಾ ಶುಲ್ಕಗಳನ್ನು ಕಟ್ಟಿಸಿಕೊಳ್ಳುವುದು.
6. **OMR** ಅಂಕಪಟ್ಟಿ ಆಧಾರದ ಮೇಲೆ ಪರೀಕ್ಷಾ ಶುಲ್ಕ ಕಟ್ಟಿದ ಹಳೆ ಪಠ್ಯ ಕ್ರಮ ಹಾಗು ಹೊಸ ಪಠ್ಯ ಕ್ರಮದ ಎಲ್ಲಾ ಪುನರಾವರ್ತಿತ ಅಭ್ಯರ್ಥಿಗಳಿಗೆ ಅರ್ಜಿ ಕ್ರಮ ಸಂಖ್ಯೆ (Application Serial Number) ಕಾಲಂನಲ್ಲಿ 1001 ರಿಂದ ಪ್ರಾರಂಭಿಸಿ ಸಂಖ್ಯೆಗಳನ್ನು ನೀಡಿ ಮುಂದುವರಿಸಿ ಸಂಖ್ಯೆಗಳಿಗನುಗುಣವಾಗಿ ಶೇಡಿಂಗ್ ಮಾಡಬೇಕು.
7. ಅಭ್ಯರ್ಥಿಗಳ ಅಂಕಪಟ್ಟಿ ಮತ್ತು ಪರೀಕ್ಷಾ ಅರ್ಜಿಗಳನ್ನು **OMR (Marks Card cum Application)** ಸ್ಕ್ಯಾನಿಂಗ್ ಮಾಡಲಾಗುತ್ತದೆ ಆದ್ದರಿಂದ ಶುಲ್ಕ ಪಾವತಿಸಿದ ಅನುತ್ತೀರ್ಣ ಅಭ್ಯರ್ಥಿಗಳ **OMR** ಅಂಕಪಟ್ಟಿಗಳಲ್ಲಿನ ವಿವರಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಿ ಶೇಡಿಂಗ್ ಮಾಡುವುದು.

8. ಜೂನ್/ಜುಲೈ–2017ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ <u>ಅನುತ್ತೀರ್ಣರಾದ</u> ವಿದ್ಯಾರ್ಥಿಗಳು ನಿಯಮಾನುಸಾರ ಫಲಿತಾಂಶ ತಿರಸ್ಕರಿಸಿ ಪರೀಕ್ಷೆ ಬರೆಯಲು ಇಚ್ಚಿಸಿದಲ್ಲಿ, ಮೂಲ ಅನುತ್ತೀರ್ಣ **OMR** ಗಳನ್ನು ಪಡೆದುಕೊಂಡ ನಂತರವೇ ಕ್ರಮವಹಿಸುವುದು. ಶುಲ್ಕಗಳ ಬಗ್ಗೆ ಫಲಿತಾಂಶ ತಿರಸ್ಕರಣೆ ಅರ್ಜಿಯ ಹಿಂಬದಿಯಲ್ಲಿನ ಸೂಚನೆಗಳನ್ನು ಗಮನಿಸುವುದು.

**<u>ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿ OMR ಅಂಕಪಟ್ಟಿ ನಮೂನೆ ಇಲ್ಲದ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಡೆಯುವ ಬಗ್ಗೆ:</u>**

9. ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ **OMR** ಗಳನ್ನು ಮುದ್ರಿಸಿ ಕಳುಹಿಸಿಕೊಡಲಾಗಿತ್ತು. ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವಾಗ **OMR** ಗಳನ್ನು ಬಳಸಿಕೊಳ್ಳುವುದು. **ಜೆರಾಕ್ಸ್ ಮಾಡಿದ, ಟೈಪ್ ಮಾಡಿದ ಅಥವಾ ಕೈಬರಹದ ಪರೀಕ್ಷಾ ಅರ್ಜಿ ಆಧಾರದ ಮೇಲೆ ಶುಲ್ಕಗಳನ್ನು ಕಟ್ಟಿಸಿ ಕೊಳ್ಳಬಾರದು.**

10. ಇಲಾಖೆಯಿಂದ ಅಧಿಕೃತವಾಗಿ ಮುದ್ರಿಸಿದ ಇಲ್ಲವೆ ದ್ವಿಪ್ರತಿ ನೀಡಿರುವಂತಹ ಅರ್ಜಿಗಳ ಆಧಾರದ ಮೇಲೆ ಮಾತ್ರ ಶುಲ್ಕ ಕಟ್ಟಿಸಿ ಕೊಳ್ಳುವುದು. **MCA** ಗಳಲ್ಲಿ ವಿದ್ಯಾರ್ಥಿಗಳ ಭಾವಚಿತ್ರ ಮುದ್ರಿತವಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಮೂರು ಭಾವಚಿತ್ರಗಳನ್ನು ಪಡೆದು ಕಾಲೇಜುಗಳಲ್ಲಿ ಕಾಯ್ದಿರಿಸಿಕೊಳ್ಳುವುದು.

11. **ಇಂತಹ ವಿದ್ಯಾರ್ಥಿಗಳ ಅರ್ಜಿಗಳಿಗೆ ಅರ್ಜಿ ಕ್ರಮ ಸಂಖ್ಯೆಯ (Application Serial Number) ಕಾಲಂನಲ್ಲಿ 3001 ರಿಂದ ನೀಡಿ ಪ್ರತ್ಯೇಕ ಬಂಚ್ ಮಾಡಿ ಲಕೋಟೆಯಲ್ಲಿರಿಸುವುದು.**

**<u>ಉತ್ತೀರ್ಣ ಹಾಗೂ ಅನುತ್ತೀರ್ಣ ಫಲಿತಾಂಶ ತಿರಸ್ಕರಣೆ ಹಾಗೂ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಪಡೆಯುವ ಬಗ್ಗೆ:</u>**

12. ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಯಾವುದಾದರೂ ವಿಷಯದಲ್ಲಿ/ಗಳಲ್ಲಿ ಫಲಿತಾಂಶ ತಿರಸ್ಕರಿಸಿ, ಪುನಃ ಪರೀಕ್ಷೆ ಬರೆಯಲು ಇಚ್ಚಿಸಿದಲ್ಲಿ ನಿಯಮಾನುಸಾರ ಅವಕಾಶವಿರುತ್ತದೆ.

13. **ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆ ಮಾಡುವ ಬಗ್ಗೆ:**
   - **a)** **ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆ ಮಾಡುವ ಸಂದರ್ಭದಲ್ಲಿ ಅರ್ಜಿ ನಮೂನೆಯಲ್ಲಿ ತಿಳಿಸಿರುವಂತೆ ₹ 20/- ಛಾಪಾ ಕಾಗದದಲ್ಲಿ ನೋಟರಿ ಮುಂದೆ ಘೋಷಣೆ ಮಾಡಿದ ಮೂಲ ಪತ್ರವನ್ನು ಕಡ್ಡಾಯವಾಗಿ ನೀಡತಕ್ಕದ್ದು.**
   - **b)** ಇಂತಹ ವಿದ್ಯಾರ್ಥಿಗಳು ಪ್ರಾಂಶುಪಾಲರ ಮುಖಾಂತರ ಕೇಂದ್ರ ಕಛೇರಿಗೆ ಅರ್ಜಿ ಹಾಗೂ ಮೂಲ ಅಂಕಪಟ್ಟಿಯನ್ನು ಸಲ್ಲಿಸಿ ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದು ದಿನಾಂಕ 27-09-2017ರ ಒಳಗೆ **ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು** ಅವಕಾಶ ನೀಡಿದೆ.
   - **c)** 27–09–2017ರ ನಂತರ ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದವರು ದಿನಾಂಕ 09-10-2017ರವರೆಗೆ **ದಂಡ ಶುಲ್ಕಗಳೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಿ** ಅವಕಾಶ ನೀಡಿದೆ.
   - **d)** 09–10–2017ರ ನಂತರ ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದವರು ದಿನಾಂಕ 30-10-2017ರವರೆಗೆ **ವಿಶೇಶ ದಂಡ ಶುಲ್ಕಗಳೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು** ಅವಕಾಶ ನೀಡಿದೆ.

14. ಪ್ರಾಂಶುಪಾಲರು ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದವರ ಪರೀಕ್ಷಾ ಅರ್ಜಿಗಳೊಂದಿಗೆ ಕಡ್ಡಾಯವಾಗಿ ರದ್ದು ಪಡಿಸಲಾದ **ಮೂಲ ಅಂಕಪಟ್ಟಿಗಳನ್ನು** ಕೇಂದ್ರ ಕಛೇರಿಗೆ ಕಳುಹಿಸಿಕೊಡಬೇಕು.

**"ಫಲಿತಾಂಶ ತಿರಸ್ಕರಣೆಗೆ ಪ್ರಾಂಶುಪಾಲರ ಮುಖಾಂತರ ಅರ್ಜಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಿ ಅನುಮತಿ ಪಡೆದುಕೊಳ್ಳಬೇಕು"**

## <u>ಫಲಿತಾಂಶ ತಿರಸ್ಕರಣೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ:</u>

15. **ಫಲಿತಾಂಶ ತಿರಸ್ಕರಿಸಲು ಕಳುಹಿಸುವಾಗ 30 ರಿಂದ 34 ಅಂಕಗಳು ದೊರೆತು ಉತ್ತೀರ್ಣಗೊಂಡಿರುವ** ವಿಷಯಗಳ ಫಲಿತಾಂಶವನ್ನು ಸಹ ಕಡ್ಡಾಯವಾಗಿ ತಿರಸ್ಕರಿಸಬೇಕು. ಈ ನಿಯಮ **ಭಾಗ–1** ಮತ್ತು **ಭಾಗ–2** ಕ್ಕೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ.

**ಉತ್ತೀರ್ಣ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸುವ ಅರ್ಜಿಗಳಿಗೆ ಅರ್ಜಿ ಸಂಖ್ಯೆ ನೀಡುವ ಬಗ್ಗೆ:**

16. ಫಲಿತಾಂಶ ತಿರಸ್ಕರಣೆಗೆ ಅನುಮತಿ ನೀಡಿದ ಅನುತ್ತೀರ್ಣ **OMR** ಅಂಕಪಟ್ಟಿ–ವ–ಅರ್ಜಿಗಳಿಗೆ 1001 ರಿಂದ ಕ್ರಮ ಸಂಖ್ಯೆಯನ್ನು ನೀಡುವ ಪುನರಾವರ್ತಿತ ಅರ್ಜಿಗಳೊಂದಿಗೆ ಸೇರಿಸಿ ಸಂಖ್ಯೆಯನ್ನು ನೀಡಬೇಕು.
17. ಉತ್ತೀರ್ಣ ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಣೆಗೆ ಅನುಮತಿ ಪಡೆದು ಶುಲ್ಕ ಕಟ್ಟಿದ ವಿದ್ಯಾರ್ಥಿಗಳ **ಮೂಲ ಉತ್ತೀರ್ಣ** ಪ್ರಮಾಣ ಪತ್ರಗಳಿಗೆ ಅರ್ಜಿ ಕ್ರಮ ಸಂಖ್ಯೆ 4001 ರಿಂದ ಪ್ರಾರಂಭಿಸಿ ಪ್ರತ್ಯೇಕ ಬಂಚ್ ಮಾಡಬೇಕು.
18. ಮಾರ್ಚ್ ಹಾಗೂ ಜುಲೈ–2017ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಫಲಿತಾಂಶ ತಿರಸ್ಕರಿಸಿ ಮಾರ್ಚ್ 2018ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆಯಲು ಇಚ್ಛಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ **ಮೂಲ ಅಂಕಪಟ್ಟಿ** (Original Marks Card) ಹಾಗೂ ಮೂಲ ಶುಲ್ಕ ಪಾವತಿ ಚಲನ್ ನೊಂದಿಗೆ **ಇಲಾಖೆಗೆ** ಅರ್ಜಿ ಸಲ್ಲಿಸುವುದು.
19. ಶುಲ್ಕವನ್ನು ಖಜಾನೆ ಚಲನ್ ಮೂಲಕ **"0202-01-102-01-07 (ಟ್ಯೂಷನ್ ಮತ್ತು ಇತರೆ ಶುಲ್ಕಗಳು)"** ಈ ಲೆಕ್ಕಶೀರ್ಷಿಕೆಗೆ ಜಮಾ ಮಾಡಬೇಕು.

**ಮಾರ್ಚ್ 2018ರಲ್ಲಿ ನಡೆಸಲಾಗುವ ವಾರ್ಷಿಕ ಪರೀಕ್ಷೆಗೆ ಅನುತ್ತೀರ್ಣ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ ಮತ್ತು ಫಲಿತಾಂಶ ತಿರಸ್ಕರಣಾ ಶುಲ್ಕಗಳ ವಿವರ:**

| **ಪರೀಕ್ಷಾ ಶುಲ್ಕ**<br>**(ಪರಿಶಿಷ್ಠ ಜಾತಿ, ಪರಿಶಿಷ್ಠ ವರ್ಗ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳನ್ನು ಹೊರತು ಪಡಿಸಿ)** | |
|---|---|
| ಒಂದು ವಿಷಯಕ್ಕೆ | ₹ 101–00 |
| ಎರಡು ವಿಷಯಕ್ಕೆ | ₹ 201–00 |
| ಮೂರು ಅಥವಾ ಹೆಚ್ಚಿನ ವಿಷಯಗಳು | ₹ 302–00 |
| **ಪರಿಶಿಷ್ಠ ಜಾತಿ, ಪರಿಶಿಷ್ಠ ವರ್ಗ ಹಾಗೂ ಪ್ರವರ್ಗ–1ರ** ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಂದ ಕಡ್ಡಾಯವಾಗಿ ಸಲ್ಲಿಸಬೇಕಾದ ಅಂಕಪಟ್ಟಿ ಶುಲ್ಕ | ₹ 36–00 |

| **ಫಲಿತಾಂಶ ತಿರಸ್ಕರಣಾ ಶುಲ್ಕ**<br>(ಫಲಿತಾಂಶ ತಿರಸ್ಕರಿಸಿದ ಎಲ್ಲಾ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಪರೀಕ್ಷಾ ಉಲ್ಕವನ್ನು ಪ್ರತ್ಯೇಕವಾಗಿ ಪಡೆಯುವುದು) | |
|---|---|
| ಪ್ರಥಮ ಬಾರಿಗೆ ಒಂದು ವಿಷಯಕ್ಕೆ | ₹ 126–00 |
| ದ್ವಿತೀಯ ಹಾಗೂ ಅಂತಿಮ ಬಾರಿಗೆ ಒಂದು ವಿಷಯಕ್ಕೆ | ₹ 252–00 |

**ಮಾರ್ಚ್ 2018ರಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅನುತ್ತೀರ್ಣ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕಗಳು:**

| **ದಂಡ ಶುಲ್ಕ ರಹಿತ ಪರೀಕ್ಷಾ ಶುಲ್ಕ ಹಾಗೂ ಅರ್ಜಿ ಸಲ್ಲಿಸುವ ಬಗ್ಗೆ** | | |
|---|---|---|
| ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಕಡೇ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಒಂದೇ ಕಂತಿನಲ್ಲಿ ಖಜಾನೆಗೆ ಸಂದಾಯ ಮಾಡಬೇಕಾದ ದಿನಾಂಕ | ಕಾಲೇಜಿನವರು ಪರೀಕ್ಷಾ ಅರ್ಜಿಗಳನ್ನು ಮೂಲ ಚಲನ್ ಸಹಿತ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಿನಾಂಕ |
| **20-09-2017** | **21-09-2017** | **22-09-2017** |

ಉಪನಿರ್ದೇಶಕರ ಕಛೇರಿಯಲ್ಲಿ ದಿನಾಂಕ 22-09-2017ರವರೆಗೆ ಸ್ವೀಕೃತ ದಂಡ ಶುಲ್ಕ ರಹಿತ ಅರ್ಜಿಗಳ ಲಕೋಟೆಗಳನ್ನು ಕಾಲೇಜುವಾರು ಕ್ರೋಢೀಕೃತ ಪಟ್ಟಿಯೊಂದಿಗೆ ದಿನಾಂಕ 25-09-2017ರಂದು ಕೇಂದ್ರ ಕಛೇರಿಗೆ ಕಡ್ಡಾಯವಾಗಿ ತಲುಪಿಸತಕ್ಕದ್ದು.

| ದಿನಾಂಕ 21-09-2017 ರಿಂದ ದಿನಾಂಕ 06-10-2017ರವರೆಗೆ ದಿನ ಒಂದಕ್ಕೆ ₹ 36.00 ರಂತೆ ಗರಿಷ್ಠ ₹ 360.00 ದಂಡ ಶುಲ್ಕ ಸಹಿತ ಪರೀಕ್ಷಾ ಶುಲ್ಕ ಹಾಗೂ ಅರ್ಜಿ ಸಲ್ಲಿಸುವ ಬಗ್ಗೆ | | |
|---|---|---|
| ಅಭ್ಯರ್ಥಿಗಳು ದಂಡ ಶುಲ್ಕದೊಂದಿಗೆ ಕಾಲೇಜಿಗೆ ಪರೀಕ್ಷಾ ಶುಲ್ಕ ಪಾವತಿಸಲು ಕಡೆ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಖಜಾನೆ ಸಂದಾಯ ಮಾಡುವ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ದಿನಾಂಕ |
| **06-10-2017** | **07-10-2017** | **09-10-2017** |

ಉಪನಿರ್ದೇಶಕರ ಕಛೇರಿಯಲ್ಲಿ ದಿನಾಂಕ 09-10-2017ರವರೆಗೆ ಸ್ವೀಕೃತ ದಂಡ ಶುಲ್ಕ ಸಹಿತ ಅರ್ಜಿಗಳ ಲಕೋಟೆಗಳನ್ನು ಕಾಲೇಜುವಾರು ಕ್ರೋಢೀಕೃತ ಪಟ್ಟಿಯೊಂದಿಗೆ ದಿನಾಂಕ 11-10-2017ರಂದು ಕೇಂದ್ರ ಕಛೇರಿಗೆ ಕಡ್ಡಾಯವಾಗಿ ತಲುಪಿಸತಕ್ಕದ್ದು.

| ದಂಡ ಶುಲ್ಕ ₹ 360.00 ಗಳೊಂದಿಗೆ ದಿನಾಂಕ 07-10-2017 ರಿಂದ 26-10-2017ರವರೆಗೆ ದಿನ ಒಂದಕ್ಕೆ ₹ 50.00 ರಂತೆ ಗರಿಷ್ಠ ₹ 1000.00 ವಿಶೇಷ ದಂಡ ಶುಲ್ಕ ಸಹಿತ ಪರೀಕ್ಷಾ ಶುಲ್ಕ ಹಾಗೂ ಅರ್ಜಿ ಸಲ್ಲಿಸುವ ಬಗ್ಗೆ | | |
|---|---|---|
| ಅಭ್ಯರ್ಥಿಗಳು ದಂಡ ಶುಲ್ಕದೊಂದಿಗೆ ಕಾಲೇಜಿಗೆ ಪರೀಕ್ಷಾ ಶುಲ್ಕ ಪಾವತಿಸಲು ಕಡೆ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಖಜಾನೆ ಸಂದಾಯ ಮಾಡುವ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ದಿನಾಂಕ |
| **26-10-2017** | **27-10-2017** | **28-10-2017** |

ಉಪನಿರ್ದೇಶಕರ ಕಛೇರಿಯಲ್ಲಿ ದಿನಾಂಕ 28-10-2017ರವರೆಗೆ ಸ್ವೀಕೃತ ದಂಡ ಶುಲ್ಕ ಸಹಿತ ಅರ್ಜಿಗಳ ಲಕೋಟೆಗಳನ್ನು ಕಾಲೇಜುವಾರು ಕ್ರೋಢೀಕೃತ ಪಟ್ಟಿಯೊಂದಿಗೆ ದಿನಾಂಕ 30-10-2017ರಂದು ಕೇಂದ್ರ ಕಛೇರಿಗೆ ಕಡ್ಡಾಯವಾಗಿ ತಲುಪಿಸತಕ್ಕದ್ದು.

**ನಿಗದಿಗೊಳಿಸಿರುವ ದಿನಾಂಕದ ನಂತರ OMR ಅರ್ಜಿಗಳನ್ನು ಸಲ್ಲಿಸಿದಲ್ಲಿ ತಿರಸ್ಕರಿಸಲಾಗುವುದು.**

**OMR ನಮೂನೆಗಳೊಂದಿಗೆ ಪ್ರಾಂಶುಪಾಲರು ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು:**

1. ಶುಲ್ಕ ಪಾವತಿಸಿದ ಅಭ್ಯರ್ಥಿಗಳ **OMR** ಅಂಕಪಟ್ಟಿಗಳನ್ನು ಟ್ಯಾಗ್ ಅಥವಾ ಪಿನ್ ಮಾಡದೆ ಅರ್ಜಿಗಳನ್ನು ಪಾಲಿಥಿನ್ ಕವರಿನಲ್ಲಿರಿಸಬೇಕು. ಒಂದು ಲಕೋಟೆಯಲ್ಲಿ ಗರಿಷ್ಠ **100 OMR** ಗಳನ್ನು ಮಾತ್ರ ತುಂಬಿಸುವುದು. ಹಾಗೂ ಪ್ರತಿಯೊಂದು ಲಕೋಟೆಯ ಮೇಲೆ ಲಕೋಟೆ ಸಂಖ್ಯೆಯನ್ನು ನಮೂದಿಸುವುದು. (ಉದಾ: 3 ಲಕೋಟೆಗಳು ಇದ್ದಲ್ಲಿ 1/3, 2/3, 3/3.......) ಲಕೋಟೆಗಳ ಮೇಲೆ **OMR / MCAಗಳ ಒಟ್ಟು ಸಂಖ್ಯೆಯನ್ನು ಕಡ್ಡಾಯವಾಗಿ ಲಕೋಟೆಯ ಮೇಲೆ ನಮೂದಿಸುವುದು.**
2. ಭರ್ತಿ ಹಾಗೂ ಶೇಡಿಂಗ್ ಮಾಡಲಾದ **OMR/MCA** ನಮೂನೆಗಳನ್ನು ಪ್ರತ್ಯೇಕ ಲಕೋಟೆಗಳಲ್ಲಿ (Inner Cover) ಹಾಕುವುದು.
3. ಶುಲ್ಕ ಪಾವತಿಸಿರುವ ಮೂಲ ಚಲನ್ ಹಾಗೂ ಶುಲ್ಕ ಪಾವತಿಸಿದ ಎಲ್ಲಾ ವಿವರಗಳ Fee Statementನ್ನು ಸಲ್ಲಿಸುವುದು.

4. ಇವೆಲ್ಲವುಗಳನ್ನು ಪ್ರತ್ಯೇಕ ಲಕೋಟೆಯಲ್ಲಿ ಇಟ್ಟು ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ, ವಿಳಾಸದ ಬರೆದು ಲಕೋಟೆಯ ಮೇಲೆ ಸ್ಪಷ್ಟ ಅಕ್ಷರಗಳಲ್ಲಿ:

a. ದಂಡ ರಹಿತ ಪರೀಕ್ಷಾ "ಪುನರಾವರ್ತಿತ ಅರ್ಜಿಗಳು" (REPEATERS' APPLICATIONS WITHOUT FINE) ಎಂದು ಬರೆದು ದಿನಾಂಕ **22-09-2017** ರಂದು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

b. ದಂಡ ಸಹಿತ ಪರೀಕ್ಷಾ "ಪುನರಾವರ್ತಿತ ಅರ್ಜಿಗಳು" (REPEATERS' APPLICATIONS WITH FINE) ಎಂದು ಬರೆದು ದಿನಾಂಕ **09-10-2017** ರಂದು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

c. ವಿಶೇಷ ದಂಡ ಸಹಿತ ಪರೀಕ್ಷಾ "ಪುನರಾವರ್ತಿತ ಅರ್ಜಿಗಳು" (REPEATERS' APPLICATIONS WITH FINE) ಎಂದು ಬರೆದು ದಿನಾಂಕ **28-10-2017** ರಂದು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

**ಪುನರಾವರ್ತಿತ ಅರ್ಜಿ ಮತ್ತು ಪರೀಕ್ಷಾ ಶುಲ್ಕ ವಿವರಗಳ ನಮೂನೆ (Repeaters' Fee Statement)**

| ಅರ್ಜಿ ಸಂಖ್ಯೆ | ವಿದ್ಯಾರ್ಥಿಯ ಹೆಸರು | ಕಳೆದ ಬಾರಿ ಪರೀಕ್ಷೆ ತೆಗೆದುಕೊಂಡ ನೋಂದಣಿ ಸಂಖ್ಯೆ, ವರ್ಷ ಮತ್ತು ತಿಂಗಳು | ಪರೀಕ್ಷಾ ಶುಲ್ಕ ಸಂದಾಯ ಮಾಡಿದ ವಿಷಯಗಳ ವಿವರ | ಪರೀಕ್ಷಾ ಶುಲ್ಕ ಪಾವತಿಸಿದ ವಿವರ | | | | |
|---|---|---|---|---|---|---|---|---|
| | | | | ಶುಲ್ಕ ಪಡೆದ ದಿನಾಂಕ | ಶುಲ್ಕ ₹ | ದಂಡ ಶುಲ್ಕ ₹ | ಮೊತ್ತ ₹ | ಚಲನ್ ಸಂಖ್ಯೆ |
| 1 | 2 | 3 | 4 | 5 | 6 | 7 | 9 | 10 |
| | | | | | | | | |

ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಪರೀಕ್ಷಾ ಅರ್ಜಿಗಳನ್ನು ಕೆಳಗೆ ತಿಳಿಸಿದ ವೇಳಾಪಟ್ಟಿಯಂತೆ ಕೇಂದ್ರ ಕಛೇರಿಗೆ ಸಲ್ಲಿಸಬೇಕು:

| ಪುನರಾವರ್ತಿತ ಅರ್ಜಿಗಳ ವಿವರ | ಕೇಂದ್ರ ಕಛೇರಿಗೆ ಸಲ್ಲಿಸಬೇಕಾದ ದಿನಾಂಕ |
|---|---|
| ದಿನಾಂಕ **22-09-2017** ರಂದು ಸ್ವೀಕರಿಸಿ ದಂಡ ರಹಿತ ಪರೀಕ್ಷಾ ಪುನರಾವರ್ತಿತ ಅರ್ಜಿಗಳು (REPEATERS' APPLICATIONS WITHOUT FINE) | **25-09-2017** |
| ದಿನಾಂಕ **09-10-2017** ರಂದು ಸ್ವೀಕರಿಸಿ ದಂಡ ಸಹಿತ ಪರೀಕ್ಷಾ ಪುನರಾವರ್ತಿತ ಅರ್ಜಿಗಳು (REPEATERS' APPLICATIONS WITH FINE) | **11-10-2017** |
| ದಿನಾಂಕ **28-10-2017** ರಂದು ಸ್ವೀಕರಿಸಿ ವಿಶೇಷ ದಂಡ ಸಹಿತ ಪರೀಕ್ಷಾ ಪುನರಾವರ್ತಿತ ಅರ್ಜಿಗಳು (REPEATERS' APPLICATIONS WITH FINE) | **31-10-2017** |

18/8/17

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪಪೂಶಿಇ. (ಅಂತರ್ ಜಾಲದಲ್ಲಿ ಪ್ರಕಟಿಸಲು).
4. ಹೆಚ್ಚುವರಿ ಕಛೇರಿ ಪ್ರತಿ.